ಆಡಳಿತ ಪಕ್ಷದವರು ಯಾವುದೇ ಸಂದರ್ಭದಲ್ಲಿ ಕೂಡ ಬಜೆಟ್ ಮಂಡನೆ ಮಾಡಿದಾಗ ಹೆಚ್ಚಿಗೆ ಮಾತನಾಡಲಿಲ್ಲ. ವಿರೋಧ ಪಕ್ಷದವರು ಎಲ್ಲೆಲ್ಲಿ ಏನೇನು ಸರಿಯಾಗಿ ಆಗಬೇಕು ಎಂದು ಹೇಳುವಂತಹ ವಿಚಾರಗಳನ್ನು ಕನ್‌ಸ್ಟ್ರಕ್ಟಿವ್ ಸಲಹೆ ಸೂಚನೆಗಳನ್ನು ಕೊಡುವಂತಹ ಪ್ರಯತ್ನಗಳನ್ನು ಮಾಡಿದ್ದಾರೆ. ಈಗತಾನೇ ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ಈ ವಿಚಾರವನ್ನು ಮಾತನಾಡಿದ್ದೇನೆ. ನಮ್ಮ ಅಧ್ಯಕ್ಷರು ಸರಿಯಾಗಿ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕೆಂದು ಹೇಳುವುದಕ್ಕೆ ಪೂರ್ಣಭಾವಿಯಾಗಿ ಹೇಗೆ ಮಾತನಾಡಬೇಕೆಂದು ನಮಗೆ ಸೂಚನೆಗಳನ್ನು ಕೊಟ್ಟಿದ್ದಾರೆ. ಆದರಲ್ಲಿ ಆಡಳಿತ ಪಕ್ಷದವರಿಗೆ ನಾಲ್ಕು ಗಂಟೆಗಳು ಸುದೀರ್ಘವಾಗಿ ಅವಕಾಶ ಸಿಕ್ಕಿದೆ. ಪ್ರಾಯಶಃ ತಾವು ಸಮರ್ಪಕವಾಗಿದ್ದೀರಿ, ಒಳ್ಳೆಯ ರೀತಿಯಲ್ಲಿ ಪ್ರಸ್ತಾಪ ಮಾಡಿದ್ದೀರಿ ಅಗು ಹೋಗುಗಳ ಬಗ್ಗೆ ಚಿಂತನೆ ಮಾಡಿದ್ದೀರಿ. ನಿಮ್ಮ ಪಕ್ಷದ ಪರವಾಗಿ ಕೂಡ ನೀವು ಚರ್ಚೆಯನ್ನು ಮಾಡಿಕೊಂಡಿದ್ದೀರಿ. ಆದಕಾರಣ ನಿಮಗೆ ಕೊಟ್ಟಿರುವ ನಾಲ್ಕು ಗಂಟೆ ಅವಧಿಯನ್ನು ಎರಡು ಗಂಟೆಗೆ ಸೀಮಿತ ಮಾಡಿ ಎರಡು ಗಂಟೆಗಳ ಅವಧಿಯನ್ನು ವಿರೋಧ ಪಕ್ಷಗಳಿಗೆ ಕೊಡಬೇಕೆಂದು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ನನ್ನ ವಿನಂತಿ ಇಷ್ಟೆ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಬಹಳಷ್ಟು ಸುದೀರ್ಘವಾಗಿ ಚರ್ಚೆ ಮಾಡಲಿಕ್ಕೆ ವಿರೋಧ ಪಕ್ಷಗಳಿಗೆ ಅವಕಾಶವಾಗಲಿಲ್ಲ. ಬಜೆಟ್ ಭಾಷಣದ ಮೇಲೆ ಮಾತನಾಡಲಿಕ್ಕೆ ಕೇವಲ ಎರಡು ಗಂಟೆ ಅವಕಾಶ ಕೊಟ್ಟರೆ ಹೇಗೆ? ಹೆಚ್ಚಿನ ಸದಸ್ಯರು ಹೊಸ ಹೊಸ ವಿಚಾರಗಳನ್ನು ಸರ್ಕಾರಕ್ಕೆ ಸಲಹೆ ಸೂಚನೆಗಳ ಮುಖಾಂತರ ಕೊಡಬೇಕೆನ್ನುವ ವಿಚಾರದಲ್ಲಿದ್ದಾರೆ. ದಯವಿಟ್ಟು ತಾವು ಮತ್ತೊಮ್ಮೆ ವಿರೋಧ ಪಕ್ಷಗಳಿಗೆ ಹೆಚ್ಚಿನ ಅವಕಾಶ ಕೊಡಬೇಕೆಂದು ಹೇಳುವಂತಹ ವಿನಂತಿಯನ್ನು ಎಲ್ಲ ವಿರೋಧ ಪಕ್ಷಗಳವರ ಪರವಾಗಿ ನಾನು ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು: ತಮ್ಮ ಸಲಹೆಯನ್ನು ಪುನರ್ ವಿಮರ್ಶಿಸೋಣ.

12.40 ಪಿ.ಎಂ

ವಿಷಯ(ii): ಚಿಂಚೋಳಿ ತಾಲ್ಲೂಕಿನಲ್ಲಿರುತಕ್ಕಂಥ ಬಂಜಾರ ಸಮಾಜದ ತಾಂಡಾಗಳಲ್ಲಿ ಕಳೆದ ಐದಾರು ವರ್ಷಗಳಿಂದ ಹೆಣ್ಣು ಮಕ್ಕಳ ಮಾರಾಟ ಆಗುತ್ತಿರುವ ವ್ಯವಹಾರದ ಬಗ್ಗೆ ಪತ್ರಿಕಾ ವರದಿ ಬಂದಿರುವುದು.

ಅಧ್ಯಕ್ಷರು: ಹೊಸ ಸದಸ್ಯರಿಗೆ ನಾನು ಇನ್ನೂ ಅವಕಾಶ ಕೊಟ್ಟಿಲ್ಲ. ಕೈಲಾಸನಾಥ ಪಾಟೀಲರು ಶೂನ್ಯವೇಳೆಯಲ್ಲಿ ಮುಖ್ಯವಾದ ವಿಷಯ ಪ್ರಸ್ತಾಪ ಮಾಡಲಿದ್ದಾರೆ. ಅವರು ಇದುವರೆಗೂ ಮಾತನಾಡಿಲ್ಲ.

+ ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ಶೂನ್ಯವೇಳೆಯಲ್ಲಿ ನಾನು ಪತ್ರಿಕೆ ಮುಖಾಂತರ ಬೆಳಕಿಗೆ ಬಂದಂಥ ನಮ್ಮ ತಾಲ್ಲೂಕಿನ ಒಂದು ದಾರುಣವಾದ ಕತೆಯನ್ನು ಈ ಸದನದ ಮುಂದೆ ಮತ್ತು ತಮ್ಮ ಮುಖಾಂತರ ಮಾನ್ಯ ಗೃಹ ಸಚಿವರ ಗಮನಕ್ಕೆ ತರುವುದಕ್ಕೆ ನಾನು ನಿಂತಿದ್ದೇನೆ. ಚಿಂಚೋಳಿ ತಾಲ್ಲೂಕಿನಲ್ಲಿ ಇರತಕ್ಕಂಥ ಈ ಬಂಜಾರ ಸಮಾಜದ ತಾಂಡಾಗಳಲ್ಲಿ ಕಳೆದ ಐದಾರು ವರ್ಷಗಳಿಂದ ನಡೆಯುತ್ತಿರತಕ್ಕಂಥ ಈ ವ್ಯವಹಾರದ ಬಗ್ಗೆ ಈ ಪತ್ರಿಕಾ ವರದಿ ಬೆಳಕು ಚೆಲ್ಲಿದೆ. ಈ ಐದಾರು ವರ್ಷಗಳಿಂದ ಈ

ಲಂಬಾಣಿ ತಾಂಡಾಗಳಲ್ಲಿ ಹೊಸದಾಗಿ ಹುಟ್ಟತಕ್ಕಂಥ ಅದರಲ್ಲೂ 7 ದಿವಸದಿಂದ 2 ತಿಂಗಳವರೆಗೆ ಇರತಕ್ಕಂಥ ಹೆಣ್ಣು ಮಕ್ಕಳನ್ನು ಮಾರಾಟ ಮಾಡಲಾಗುತ್ತಿದ್ದು, ಒಬ್ಬಳು ಪಾರ್ವತಿ ವೈಫ್ ಆಫ್ ಲೋಕು ಇವರು ಸೂಲಗಿತ್ತಿಯಾಗಿದ್ದಾರೆ. ಅವರ ಮುಖಾಂತರ ಈ ಮಕ್ಕಳನ್ನು ಪಡೆದುಕೊಳ್ಳಲಾಗುತ್ತಿದೆ. ಈ ಬಂಜಾರ ಕಮ್ಯುನಿಟಿ ಏನಿದೆ ಇದು ಬಹಳ ಆರ್ಥಿಕವಾಗಿ ಕಷ್ಟದಲ್ಲಿರುವಂಥ ಕಮ್ಯುನಿಟಿ. ಇದು ಬಡತನದಲ್ಲಿ ಜನರು ಜೀವನ ನಡೆಸತಕ್ಕಂಥ ಒಂದು ಸಮಾಜ. ಇವರು ತಮ್ಮ ಬಡತನವನ್ನು ನೀಗಿಸುವುದಕ್ಕೆ ಕೇವಲ ಒಂದು ಸಾವಿರ ಅಥವಾ ಎರಡು ಸಾವಿರ ರೂಪಾಯಿಗಳಿಗೆ ಮಕ್ಕಳನ್ನು ಮಾರಾಟ ಮಾಡಿದ್ದಾರೆಂದು ನಾನು ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಇದರಲ್ಲಿ ಸಹಭಾಗಿಯಾಗಿರತಕ್ಕಂಥವರು ಈ ಪಾರ್ವತಿ ಎನ್ನುವ ಮಹಿಳೆ. ನಮ್ಮ ತಾಲ್ಲೂಕು ಆಂಧ್ರ ಬಾರ್ಡರ್‌ನಲ್ಲಿ ಇರತಕ್ಕಂಥಾದ್ದು ಈ ತಾಂಡೂರು ಪ್ರದೇಶ ಮತ್ತು ಇದು ಕೂಡ ಒಂದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಆಗಿದೆ. ಅಲ್ಲಿ ಸರಸ್ವತಿ ಅನಾಥಾಶ್ರಮ ಅಂತ ಹೇಳಿ ಒಂದು ಆಶ್ರಮ ನಡೆಯುತ್ತಿದೆ. ಆ ಆಶ್ರಮದ ಮುಖ್ಯಸ್ಥ ಕ್ರಿಸ್ಟೋಫರ್ ಎನ್ನುವಂಥ ವ್ಯಕ್ತಿ. ಇವರು ಮಕ್ಕಳನ್ನು ಕೊಂಡುಕೊಂಡು ಹೈದರಾಬಾದಿಗೆ ಸಾಗಿಸಿ, ಅಲ್ಲಿ ಇರತಕ್ಕಂಥ ಪೀಟರ್ ಸುಬ್ಬಯ್ಯ ಎನ್ನುವವರು ಈ ಎಲ್ಲಾ ವ್ಯವಹಾರಕ್ಕೆ ಮುಖ್ಯಸ್ಥರು. ಅವರ ಮುಖಾಂತರ ಇಂಟರ್‌ನ್ಯಾಷನಲ್ ಏಜೆನ್ಸಿಗೆ ಈ ಮಕ್ಕಳನ್ನು ಸಪ್ಲೈ ಮಾಡುತ್ತಿದ್ದರು ಎನ್ನುವಂಥ ಒಂದು ಧಾರುಣವಾದ ಕತೆಯನ್ನು ಇವತ್ತು ನಾವು ಪತ್ರಿಕೆ ಮುಖಾಂತರ ಓದುತ್ತಿದ್ದೇವೆ. ಇದು ನಡೆಯುತ್ತಿರುವ ಕುಂಚುವಾರಂ ಪ್ರದೇಶ ನಮ್ಮ ತಾಲ್ಲೂಕಿನಲ್ಲಿ ಬರುತ್ತದೆ. ಈ ಕುಂಚುವಾರಂನಲ್ಲಿ ಇರತಕ್ಕಂಥ ಶಾದಿಪುರ್, ವೆಂಕಟಾಪುರ್, ಕುಂಚುವಾರ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬರತಕ್ಕಂಥ 40 ಕ್ಕಿಂತಲೂ ಹೆಚ್ಚು ತಾಂಡಾಗಳಲ್ಲಿ ಇಂತಹ ವ್ಯವಹಾರ ಕಳೆದ ಐದಾರು ವರ್ಷಗಳಿಂದ ನಡೆಯುತ್ತಿದೆ ಎನ್ನುವಂಥ ವರದಿ ಇವತ್ತು ನನ್ನ ಹತ್ತಿರ ಬಂದಿದೆ. ಈ ವರದಿ ಬಂದತಕ್ಷಣ ನಾನು ಗುಲ್ಬರ್ಗಾ ಎಸ್.ಪಿ. ಯವರ ಜತೆಯಲ್ಲಿ ಮಾತನಾಡಿದ್ದೇನೆ. ಅವರು ಇದರ ಬಗ್ಗೆ ಕೂಲಂಕಷವಾದ ತನಿಖೆಯನ್ನು ನಡೆಸಿದ್ದಾರೆ. ಇದರಲ್ಲಿ ಯಾರ್ಯಾರು ಇನ್ವಾಲ್ವ್ ಆಗಿದ್ದಾರೆ, ಅವರೆಲ್ಲರನ್ನೂ ಹಿಡಿದು ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು, ಈ ಕ್ರಮವನ್ನು ಅವರು ತೆಗೆದುಕೊಂಡಿದ್ದಾರೆ. ಇದರಲ್ಲಿ ಆಂಧ್ರಪ್ರದೇಶದ ಪೊಲೀಸರ ನೆರವು ನಮ್ಮ ರಾಜ್ಯಕ್ಕೆ ಬೇಕಾಗುತ್ತದೆ. ಇದೇ ವಿಷಯವಾಗಿ ಆಂಧ್ರದಲ್ಲಿ ಕೂಡ ಅಲ್ಲಿಯ ಆಂಧ್ರಪ್ರದೇಶ ಅಸೆಂಬ್ಲಿಯಲ್ಲಿ ಚರ್ಚೆಯಾಗಿದೆ. ಅಲ್ಲಿ ಕೂಡ ಇದನ್ನು ಗಂಭೀರವಾಗಿ ಗಣನೆಗೆ ತೆಗೆದುಕೊಂಡಿದ್ದಾರೆ. ಆದ್ದರಿಂದ ನಾನು ಮಾನ್ಯ ಗೃಹಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಅವರು ಆಂಧ್ರಪ್ರದೇಶದ ಗೃಹಮಂತ್ರಿಗಳ ಜತೆಯಲ್ಲಿ ಮಾತನಾಡಿ ಈ ವಿಚಾರದಲ್ಲಿ ಹೆಚ್ಚಿನ ಸಹಕಾರವನ್ನು ನಮ್ಮ ಪ್ರದೇಶದ ಪೊಲೀಸರಿಗೆ ಕೊಡಲು ವಿನಂತಿಮಾಡಿಕೊಳ್ಳಬೇಕೆಂದು ನಾನು ಸನ್ಮಾನ್ಯ ಗೃಹಮಂತ್ರಿಗಳಿಗೆ ತಮ್ಮ ಮುಖಾಂತರ ವಿನಂತಿಮಾಡಿಕೊಳ್ಳುತ್ತೇನೆ. ಈ ವರದಿಯನ್ನು ನೋಡಿದ ತಕ್ಷಣ ನಮ್ಮ ಸಮಾಜ ಕಲ್ಯಾಣ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ನನ್ನನ್ನು ಕರೆಸಿ ಮಾತನಾಡಿದ್ದಾರೆ. ಅವರು ಕೂಡ ಈ ಜಾಗಕ್ಕೆ 'ನಾವು ಆದಷ್ಟು ತೀವ್ರವಾಗಿ ಈ ಅಧಿವೇಶನ ಮುಗಿದ ಕೂಡಲೇ ಹೋಗಿ ಅಲ್ಲಿ ಇರತಕ್ಕಂಥ ಬಡಜನರನ್ನು ಮಾತನಾಡಿಸೋಣ' ಎಂದು ಅವರು ಹೇಳಿದ್ದಾರೆ. ಏಕೆಂದರೆ ನಮ್ಮ ಸರ್ಕಾರದ ಬಜೆಟ್‌ನಲ್ಲಿ ಈ ಬಂಜಾರ ಸಮಾಜಗೋಸ್ಕರ ಅನೇಕ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮಗಳಲ್ಲಿ

ಅವರಿಗೆ ಇರತಕ್ಕಂಥ ಬಡತನ ನಿವಾರಣೆಯಾಗಬೇಕೆಂದು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದರೂ ಸರ್ಕಾರದ ಜವಾಬ್ದಾರಿ ಇರುತ್ತದೆ. ಆದ್ದರಿಂದ ನಾನು ಮತ್ತು ಸಮಾಜ ಕಲ್ಯಾಣ ಸಚಿವರು ಇಬ್ಬರೂ ಸೇರಿ ಆ ಭಾಗಕ್ಕೆ ತ್ವರಿತವಾಗಿ ಹೋಗುತ್ತೇವೆ. ಆದರೂ ಸರ್ಕಾರದ ಗಮನ ಸೆಳೆಯಬೇಕು ಮತ್ತು ಗೃಹಮಂತ್ರಿಗಳು ಆಂಧ್ರಪ್ರದೇಶದ ಗೃಹಮಂತ್ರಿಗಳ ಜತೆ ಚರ್ಚೆಮಾಡಿ ಇದಕ್ಕೆ ಒಂದು ಸಮಾಧಾನಕರವಾದ ಪರಿಹಾರವನ್ನು ನೀಡಬೇಕು ಹಾಗೂ ಇದರಲ್ಲಿ ಯಾರ್ಯಾರು ಇನ್ವಾಲ್ವ್ಡ್ ಆಗಿದ್ದಾರೆ ಅವರ ಮೇಲೆ ಕಠಿಣವಾದಂಥ ಕಾನೂನು ಕ್ರಮ ಜರುಗಿಸಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ಈ ದಿವಸ ಪತ್ರಿಕೆಯನ್ನು ಓದಿದ ಮೇಲೆ ಗುಲ್ಬರ್ಗಾ ಜಿಲ್ಲಾಧಿಕಾರಿಗಳನ್ನು ಸಂಪರ್ಕ ಮಾಡಿ, ನಮ್ಮ ಇಲಾಖೆಯ ಜಿಲ್ಲಾ ಅಧಿಕಾರಿಯನ್ನು ಸಂಪರ್ಕಮಾಡಿ ಸ್ಥಳಕ್ಕೆ ಭೇಟಿ ಕೊಟ್ಟು ತಕ್ಷಣ ಒಂದು ವರದಿಯನ್ನು ಕೊಡಬೇಕೆಂದು ತಿಳಿಸಿದ್ದೇನೆ. ಇದು ಗಂಭೀರವಾದ ವಿಚಾರ ಕೂಡ ಹೌದು. ಯಾವ ಕಾರಣದಿಂದ ಇಂತಹ ಸಣ್ಣ ಮಕ್ಕಳನ್ನು ಮಾರಾಟ ಮಾಡುತ್ತಿದ್ದಾರೆ ಎನ್ನುವುದನ್ನು ಕಂಡುಹಿಡಿಯಬೇಕಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ನಾನು ಕೂಡ ಸ್ಥಳಕ್ಕೆ ಭೇಟಿ ಕೊಟ್ಟು ಇದರ ಶೋಧನೆ ಮಾಡಿ ಇವರಿಗೆ ರಕ್ಷಣೆ ಕೊಡುವ ಕೆಲಸವನ್ನು ಮಾಡುತ್ತೇವೆ. ಇದರ ಜೊತೆಗೆ ನಮ್ಮ ಗೃಹಸಚಿವರ ಮುಖಾಂತರ ಅವರೇನು ಇಲಾಖೆಯಿಂದ ಕ್ರಮ ತೆಗೆದುಕೊಳ್ಳಬೇಕು, ಆಂಧ್ರಪ್ರದೇಶ ಸರ್ಕಾರದ ಜತೆಗೆ ಸಂಪರ್ಕಮಾಡಿ ಕ್ರಮ ಕೈಗೊಳ್ಳುವ ಬಗ್ಗೆ ಕೂಡ ಅಗತ್ಯ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ರಾಮದಾಸ್ ಮತ್ತು ಗುರುಸ್ವಾಮಿಯವರು.....

(ಗೊಂದಲ)

(ಕೆಲವು ಸದಸ್ಯರುಗಳು ತಮಗೂ ಅವಕಾಶಕೊಡಬೇಕೆಂದು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು: ಯಾವುದು ಉತ್ತರ ಬಂದಿದೆ, ಯಾವ ಮಂತ್ರಿಗಳು ಸಿದ್ಧವಾಗಿದ್ದಾರೆ, ಅವರನ್ನು ಮಾತ್ರ ನಾನು ಕರೆಯುತ್ತೇನೆ.

(ಗೊಂದಲ)

ಶ್ರೀ ಗುಂಡಪ್ಪ ವಕೀಲ್: ಇದು ಮಕ್ಕಳ ಮಾರಾಟದ ಬಗ್ಗೆ ಉತ್ತರ ಸಮರ್ಪಕವಾಗಿಲ್ಲ.

ಅಧ್ಯಕ್ಷರು: ಸಮರ್ಪಕ ಅಲ್ಲವೆಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಅದು ಮಂತ್ರಿಗಳು ಕೊಟ್ಟ ಉತ್ತರ. ಹೀಗೆ ಉತ್ತರ ಕೊಡಬೇಕು ಎಂದು ನಾನು ಮಂತ್ರಿಗಳನ್ನು ನಿರ್ದೇಶನ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ರೇವು ನಾಯ್ಕ ಬೆಳಮಗಿ: ಮಾನ್ಯ ಅಧ್ಯಕ್ಷರೇ, ಇದು ನನ್ನ ಜಿಲ್ಲೆಯ ವಿಷಯ. ನನ್ನ ಮಾಹಿತಿ ಇರುವ ಪ್ರಕಾರ ಸರಾಸರಿ ಇದು ನಾಲ್ಕೈದು ವರ್ಷಗಳಿಂದ ನಡೆಯುತ್ತಿದೆ.

ಬಡತನ ರೇಖೆಗಿಂತ ಕೆಳಗಡೆ ಇರುವ ನಮ್ಮ ಲಂಬಾಣಿ ಜನಾಂಗ ಗುಡ್ಡಗಾಡಿನಲ್ಲಿ ಇರುತ್ತಾರೆ. ಬಹಳ ಬಡತನ ಇರುವುದರಿಂದ ಸಣ್ಣ ಸಣ್ಣ ಮಕ್ಕಳನ್ನು ಮಾರಾಟ ಮಾಡುತ್ತಿದ್ದಾರೆ. ಅವು ತಾಂಡೂರು ಮುಖಾಂತರ ಹೈದರಾಬಾದ್‌ಗೆ ಹೋಗುತ್ತವೆ. ಬಡತನದ ಕಾರಣಕ್ಕೆ ಎರಡು-ಮೂರು ಸಾವಿರಕ್ಕೆ ಮಕ್ಕಳನ್ನು ಮಾರಾಟ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರದವರು ತಕ್ಷಣವೇ ಮಾಹಿತಿ ತೆಗೆದುಕೊಂಡು ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಈ ವಿಷಯ ಪತ್ರಿಕೆಯಲ್ಲಿ ಬಂದ ಮೇಲೆ ಗೊತ್ತಾಗಿದೆ. ಈ ಹಿಂದೆ ಇದು ಸರ್ಕಾರದ ಗಮನಕ್ಕೆ ಬಂದಿರಲಿಲ್ಲ. ನಾನು ಈ ಸುದ್ದಿ ತಿಳಿದಾದ ಮೇಲೆ ಎಷ್ಟು ಲಕ್ಷ ಕೊಡಬೇಕೋ ಅಷ್ಟು ಲಕ್ಷ ಕೊಟ್ಟು ಕ್ರಮ ಕೈಗೊಳ್ಳತಕ್ಕಂಥ ಕೆಲಸ ಮಾಡುತ್ತಿದ್ದೇನೆ. ಇದನ್ನು ಶೋಧನೆ ಮಾಡಬೇಕಾಗಿದೆ. ಇದು ನಮ್ಮ ಪತ್ರಿಕೆ ಆಧಾರದಮೇಲೆ ಕಂಡು ಬಂದಿದೆಯೇ ವಿನಃ ಸ್ಥಳೀಯವಾಗಿ ಸುದ್ದಿ ಬಂದಿಲ್ಲ. ಇವತ್ತು ನಮ್ಮ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಅಲ್ಲಿಗೆ ಹೋಗುತ್ತಿದ್ದಾರೆ. ಅವರು ಸ್ಥಳೀಯವಾಗಿ ಅಲ್ಲಿದ್ದು ಸಮಗ್ರವಾಗಿ ತನಿಖೆ ಮಾಡಿ ಒಂದು ವರದಿಯನ್ನು ನಾನು ತರಿಸುತ್ತೇನೆ. ಜಿಲ್ಲಾಧಿಕಾರಿಗಳು ಹೋಗಿಬರಬೇಕೆಂದು ಕೂಡ ನಾನು ಅವರ ಹತ್ತಿರ ಮಾತನಾಡಿದ್ದೇನೆ. ಅಲ್ಲಿಂದ ವರದಿ ಬಂದಮೇಲೆ ಪೂರ್ಣಪ್ರಮಾಣದಲ್ಲಿ ಏನು ಇದರ ಬಗ್ಗೆ ಮಾಹಿತಿ ಇರುತ್ತದೆ, ಅದನ್ನು ಮಾನ್ಯ ಸದಸ್ಯರ ಗಮನಕ್ಕೂ ನಾನು ತರುತ್ತೇನೆ.

ವಿಷಯ(iii): ಮೈಸೂರು ನಗರ ಪಾಲಿಕೆಯಲ್ಲಿ ಅವೈಜ್ಞಾನಿಕವಾಗಿ ಕಂದಾಯ ನಿಗದಿ ಮಾಡಿರುವ ಬಗ್ಗೆ.

ಅಧ್ಯಕ್ಷರು: ರಾಮದಾಸ್, ನೀವು ಹೇಳಿ.

+ಶ್ರೀ ಎ. ರಾಮದಾಸ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಪ್ರಮುಖವಾಗಿ ಈ ಸದನದಲ್ಲಿ ಕಳೆದ ಎರಡು ವರ್ಷಗಳಲ್ಲಿ ಮೂರನೇ ಬಾರಿ ಚರ್ಚೆಯಾಗುತ್ತ ಇರುವಂಥ ವಿಚಾರವನ್ನು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರುತ್ತಿದ್ದಕ್ಕೆ ಬಯಸುತ್ತೇನೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ಈಗ ಸುಮಾರು ಒಂದು ಲಕ್ಷ 24 ಸಾವಿರ ಕಂದಾಯವನ್ನು ಕೊಡುತ್ತಿರುವವರು, ಟ್ಯಾಕ್ಸ್ ಪೇಯರ್ಸ್‌ಗೆ ಕಂದಾಯ ಪರಿಷ್ಕರಣ ಮಾಡುವಂಥಾದ್ದನ್ನು ರೆಂಟ್ ಆಕ್ಟ್‌ನ ಅಡಿಯಲ್ಲಿ ಅದನ್ನು ತರುವುದಕ್ಕೋಸ್ಕರ ಒಂದು ಯೋಜನೆಯನ್ನು ಮಾಡಿದ್ದರು. ಅದಕ್ಕೆ ಸಂಬಂಧಪಟ್ಟಹಾಗೆ ಅದರೊಳಗೆ ತಾರತಮ್ಯಗಳು ಇವೆ, ಅಧಿಕಾರಿಗಳು ಅದನ್ನು ದುರುಪಯೋಗ ಮಾಡಿಕೊಂಡಿದ್ದಾರೆಂದು ಹೇಳಿ ತಾವೇನೆ ಇಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ ಮತ್ತು ಮುಖ್ಯಮಂತ್ರಿಗಳು ಕೂಡ ಈ ವಿಚಾರದಲ್ಲಿ ಮಧ್ಯ ಪ್ರವೇಶ ಮಾಡಿ ನೂರು ಪರ್ಸೆಂಟ್‌ನಿಂದ ಸಾವಿರ ಪರ್ಸೆಂಟ್‌ವರೆಗೆ ಮಾಡಿರುವಂಥಾದ್ದನ್ನು, ಕೆಲವರಿಗೆ 30 ಪರ್ಸೆಂಟ್ ಕಡಿಮೆ ಮಾಡಿರುವಂಥ ಎಲ್ಲ ನಿದರ್ಶನಗಳನ್ನು ಕೂಡ ಅವರ ಮುಂದೆ ಇಡಲಾಗಿತ್ತು. ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಸ್ವಾಗತಾರ್ಹ ವಿಚಾರವಾಗಿ ಸರ್ಕಾರ ಈಗ ರೆಂಟ್ ಆಕ್ಟ್‌ಲ್ಲಿರುವಂಥ ಈ ಕಂದಾಯ ಪದ್ಧತಿಯನ್ನು ತೆಗೆದುಹಾಕಿ ಆಕ್ಚುಯಲ್ ರೆಂಟ್ ಮತ್ತು ಫೇರ್‌ಬಲ್